## 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

**ಸಿ ಸಿ ನಂ . 1565/2020**

| **ಪಿರ್ಯಾದಿದಾರರು:** | **ವಿರುದ್ಧ** | **ಆರೋಪಿತರು** |
|---|---|---|
| ನಾಗರಾಜ ಡಿ. ತಂದೆ ದೇವೆಂದ್ರಪ್ಪ ಅನ್ವೇರಿ,<br>40 ವರ್ಷ, ವಾಸಃ ಲಕ್ಕಶೆಟ್ಟಿಹಳ್ಳಿ ಗ್ರಾಮ,<br>ಕಮಲಾಪೂರ ಪೊಸ್ಟ, ಹರಿಹರ | | ಅರುಣ ಕುಮಾರ ಕೆ. ಎಸ್. ತಂದೆ ಲೇಟ್<br>ಕಾಮನಹಳ್ಳಿ ಶಿವಣ್ಣ, 38 ವರ್ಷ,<br>ವಾಸಃ ಕುರ್ಕಿ ಗ್ರಾಮ, ದಾವಣಗೆರೆ. |

<u>ದಂಡಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ</u>

ಪ್ರಶ್ನೆಃ 1ಃ ಪಿರ್ಯಾದಿದಾರರ ಪರ ಮಂಡಿಸಿದ ಸಾಕ್ಷ್ಯಗಳನ್ನು ನೀವು ಕೇಳಿದ್ದೀರಾ ?

ಉತ್ತರಃ ಕೇಳಿದ್ದೇನೆ.

ಪ್ರಶ್ನೆಃ 2ಃ ಪ್ರಾಸಾ.1 ನಾಗರಾಜ ಡಿ. ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನಾದ ನೀನು ನಿನ್ನ ಕುಟುಂಬದ ಅಡಚನೆಗಾಗಿ ದಿನಾಂಕಃ 15.06.2020 ರಂದು ಪಿರ್ಯಾದುದಾರರ ಹತ್ತಿರ ರೂ.5,00,000/ ಗಳನ್ನು ಕೈಗಡ ಸಾಲವಾಗಿ ಪಡೆದು, ಸದರಿ ಹಣವನ್ನು ಮರುಪಾವತಿ ಮಾಡಲು ಒಂದು ಚೆಕ್ ನ್ನು ನೀಡಿರುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ ಸುಳ್ಳು

ಪ್ರಶ್ನೆಃ 3 ಪ್ರಾಸಾ.1 ನಾಗರಾಜ ಡಿ. ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀವು ಕೊಡಬೇಕಾದ ಹಣದ ಮರುಪಾವತಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ಯುನಿವರ್ಸಿಟಿ ಕ್ಯಾಂಪಸ್, ಶಿವಗಂಗೋತ್ರಿ ತೋಳಹುಣಸೆ ಶಾಖೆ, ದಾವಣಗೆರೆಗೆ ಸಂಬಂಧಿಸಿದಂತೆ ಒಂದು ಪೋಸ್ಟ ಡೇಟೆಡ್ ಚೆಕ್ ನಂ. 700295 ರಲ್ಲಿ ರೂ.5,00,000/ ಎಂದು ನಮೂದಿಸಿ ದಿನಾಂಕಃ 14.08.2020 ಕ್ಕೆ ಬರುವಂತೆ ಸಹಿ ಮಾಡಿ ಪಿರ್ಯಾದಿ ಹೆಸರಿಗೆ ಒಂದು ಪೋಸ್ಟ್ ಡೇಟೆಡ್ ಚೆಕ್ ಬರೆದು ಕೊಟ್ಟಿರುತ್ತಿರೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ ಸುಳ್ಳು

ಪ್ರಶ್ನೆಃ 4 ಪ್ರಾ. ಸಾ.1 ನಾಗರಾಜ ಡಿ. ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನೀವು ಕೊಟ್ಟ ಚೆಕ್‌ನ್ನು ನಗದೀಕರಣಕ್ಕಾಗಿ ದಿನಾಂಕ 15.09.2020 ರಂದು ಪಿರ್ಯಾದಿದಾರರು ತಮ್ಮ ಖಾತೆಯನ್ನು ಹೊಂದಿದ್ದ ಪಿಕೆಜಿಬಿ ಬ್ಯಾಂಕ್, ಹರಿಹರ ಶಾಖೆಯಲ್ಲಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ " ಸಾಕಷ್ಟು ಹಣವಿಲ್ಲ " ಎಂಬ ಹಿಂಬರಹದೊಂದಿಗೆ ದಿನಾಂಕ

16.09.2020 ರಂದು ವಾಪಾಸಾಯಿತು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ? ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ ಸುಳ್ಳು

ಪ್ರಶ್ನೆಃ 5 ಪ್ರಾಸಾ.1 ನಾಗರಾಜ ಡಿ. ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ , ತಾವು ತಮ್ಮ ವಕೀಲರ ಮುಖಾಂತರ ದಿನಾಂಕಃ 23.09.2020 ರಂದು ನೋಟೀಸ್ ಕಳುಹಿಸಿದ್ದು ಸದರಿ ನೋಟೀಸ್ ಗೆ ಇದುವರೆಗೂ ನೋಟಿಸ್ ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಹಾಗೂ ಯಾವುದೇ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ಮತ್ತು ನೀವು ಅವರಿಗೆ ನೀಡಬೇಕಾದ ಹಣವನ್ನು ತೆಗೆದುಕೊಳ್ಳಲು ನ್ಯಾಯಾಲಯಕ್ಕೆ ಪಿರ್ಯಾದಿಯನ್ನು ಸಲ್ಲಿಸಿರುವುದಾಗಿ ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ ? ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರಃ ಸುಳ್ಳು

ಪ್ರಶ್ನೆಃ 6ಃ ಈ ಕೇಸಿನ ಬಗ್ಗೆ ನಿಮಗೆ ಏನಾದರು ಹೇಳುವುದು ಇದೆಯೇ ?

ಉತ್ತರ ಃ ಇದೆ

ಪ್ರಶ್ನೆಃ 7ಃ ನಿಮ್ಮ ಪರವಾಗಿ ಏನಾದರು ಪ್ರತಿಸಾಕ್ಷ್ಯ ಇದೆಯೇ ?

ಉತ್ತರ ಃ ಇದೆ , ಸಾಕ್ಷಿ ಮಾಡಿಸುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು)

ದಿನಾಂಕಃ 02-12-2021
ಸ್ಥಳಃ ಹರಿಹರ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ಹರಿಹರ